# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿ, ಹೊರಮಾವು ಉಪ ವಲಯ,**
**ಮಹದೇವಪುರ ವಲಯ ಬೆಂಗಳೂರು-43.**

ಸಂಖ್ಯೆ.ಬಿಬಿಎಂಪಿ/ಸಕಂಅಹೊಉವ/(ಸಿಬ್ಬಂದಿ)ಪಿಆರ್/ /2022-23 ದಿನಾಂಕ: 21.01.2023

***ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:-21.01.2023 ರಂದು ಹೊರಮಾವು ಉಪ-ವಿಭಾಗದ ಕಲ್ಕೆರೆ ವಾರ್ಡ್-83, ರಾಮಮೂರ್ತಿನಗರ -84 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.***

**<u>ಉಪಸ್ಥಿತರು:</u>**

| ಕ್ರ.ಸಂ | ಹೆಸರು | ಹುದ್ದೆ | ಮೊ.ಸಂ |
|---|---|---|---|
| 1 | ಶ್ರೀ.ಬಸವ ಚಾರಿ | ಕಂದಾಯ ಅಧಿಕಾರಿ | |
| 2 | ಶ್ರೀ.ದೊಡ್ಡಶಾಮಚಾರಿ | ನೊಡೆಲ್ ಅಧಿಕಾರಿ ವಾರ್ಡ್ ನಂ.84 | |
| 3 | ಶ್ರೀ.ವಿನಯ್.ಕೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ | |
| 4 | ಶ್ರೀ. ರಮೇಶ್ | ಸಹಾಯಕ ಅಭಿಯಂತರರು/ವಾರ್ಡ್ ನೊಡೆಲ್ ಅಧಿಕಾರಿ ವಾರ್ಡ್ ನಂ.83 | |
| 5 | ಶ್ರೀ. ಚಂದ್ರಕಲಾ | ಕಿರಿಯ ಆರೋಗ್ಯ ಪರಿವೀಕ್ಷಕರು | |
| 6 | ಶ್ರೀ.ಪ್ರಸನ್ನ ಕುಮಾರ್ | ಜಲ ಪರಿವೀಕ್ಷಕರು | |
| 7 | ಶ್ರೀ.ವೆಂಕಟೇಶ್ | ವಾರ್ಡ್ ಮಾರ್ಷಲ್ | |
| | | ಸಾರ್ವಜನಿಕರು | |
| 1 | ಶ್ರೀ.ತಂಗದೊರೈ | ಲೇಕ್ ವ್ಯೂ ಗಾರ್ಡನ್ | - |
| 2 | ಶ್ರೀಮತಿ.ಉಷಾ ಮೂರ್ತಿ | ಮುನಿಸ್ವಾಮಿ ರೆಡ್ಡಿ ಲೇಔಟ್ | - |
| 3 | ಶ್ರೀ.ವೆಂಕಟಾಚಲಕುರಿ, | ಕಲ್ಕೆರೆ, ರಿಚ್ಚಸ್ ಗಾರ್ಡನ್ ವಾರ್ಡ್ ನಂ.83 | - |
| 4 | ಶ್ರೀಮತಿ.ರಾಜೇಶ್ವರಿ, | ದಾಸಪ್ಪ ಬಡಾವಣೆ ವಾರ್ಡ್ ನಂ.84 ಬಂಜಾರ ಬಡಾವಣೆ | - |
| 5 | ಶ್ರೀ.ನಂಜಪ್ಪ | ಸರ್.ಎಂ.ವಿ.ನಗರ ವೆಲ್‌ಫೇರ್ ಅಸೋಸಿಯೇಷನ್ ವಾರ್ಡ್ ನಂ.84 | |
| 6 | ವಿ.ಕಿರಣ್ , ಶ್ರೀ.ನಂದೀಶ್.ಎ | ಸ್ಕೆ.ಎಸ್.ಎಂ.ಎನ್‌ಕ್ಲೇವ್ | |
| 7 | ಶ್ರೀ.ಅಭಿಲಾಷ್, | ಎನ್.ಆರ್.ಐ ಬಡಾವಣೆ ವಾರ್ಡ್ ನಂ.83 | |
| 8 | ಶ್ರೀ.ಸುರೇಶ್‌ಕುಮಾರ್, ದೋಂಡಿಬಾ | ರಾಮಮೂರ್ತಿನಗರ ವೆಲ್‌ಫೇರ್ ಅಸೋಸಿಯೇಷನ್ | |
| 9 | ಶ್ರೀ.ರಾಜ್‌ಗೋಪಾಲ್ | ವಾರ್ಡ್ ನಂ.84 | |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.83 ಮತ್ತು ವಾರ್ಡ್ ನಂ.84 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್‌ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

ಮು.ತಿ.ನೋ

ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-

**ಶ್ರೀ.ತಂಗದೊರೈ ಕೆ.ಚನ್ನಸಂದ್ರ, ಕನಕನಗರ, ವಾರ್ಡ್ ನಂ.83 :-** ರವರು ಮಾತನಾಡಿ, ಕೆ.ಚನ್ನಸಂದ್ರ ಕನಕನಗರ ಮುಖ್ಯರಸ್ತೆಯಲ್ಲಿ ಪೆಟ್ರೋಲ್ ಬಂಕ್ ಹತ್ತಿರ ರಸ್ತೆ ಬದಿಯ ಚರಂಡಿಗಳನ್ನು ನಿರ್ಮಿಸಿ ನೀರು ಸರಾಗವಾಗಿ ಹರಿಯುವಂತೆ ಮಾಡುವುದು ಮತ್ತು ವಾರಣಾಸಿ/ಮಾರಗೊಂಡನಹಳ್ಳಿ ಮುಖ್ಯರಸ್ತೆಯಲ್ಲಿ ಸೆನ್ಸಾರ್ ಶಾಲೆ ಬಳಿ ಮುಖ್ಯರಸ್ತೆ ಅಭಿವೃದ್ಧಿ ಪಡಿಸಲು ಕೋರಿಕೊಂಡಿರುತ್ತಾರೆ.
ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ನಂ.83 ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀಮತಿ.ಉಷಾಮೂರ್ತಿ ಮುನಿಸ್ವಾಮಿ ರೆಡ್ಡಿ ಬಡಾವಣೆ ವಾರ್ಡ್ ನಂ.84:-** ರವರು ಮಾತನಾಡಿ, ಆದಿತ್ಯ ಬಡಾವಣೆಯ ಮುಖ್ಯರಸ್ತೆ ದುರಸ್ಥಿ ಮಾಡುವುದು. ಮತ್ತು ಸ್ಮಶಾನದ ಹತ್ತಿರ ಮೂರು ಅಡ್ಡರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು. ಹಾಗೂ ಕೃಷ್ಣ ಪಾರ್ಟಿಹಾಲ್ ಹತ್ತಿರ ಆದಿತ್ಯ ಬಡಾವಣೆಯಲ್ಲಿ ದೊಡ್ಡ ನಾಮಫಲಕವನ್ನು ತೆರವುಗೊಳಿಸುವುದು. ಮತ್ತು ಇಲ್ಲ ಬಿದ್ದಿರುವ ರಾಶಿ ಮಣ್ಣನ್ನು ಹೊರ ಸಾಗಿಸುವುದು.
ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ನಂ.83 ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ.ನಂಜಪ್ಪ ವಾರ್ಡ್ ನಂ.84:-** ರವರು ಮಾತನಾಡಿ, ಸರ್.ಎಂ.ವಿ ನಗರ 1 ಮತ್ತು 2ನೇ ಮುಖ್ಯರಸ್ತೆಯನ್ನು ಕಾಂಕ್ರೀಟ್ ರಸ್ತೆ ಆಡಿಕೊಡಲು 3ನೇ ಮುಖ್ಯರಸ್ತೆಯನ್ನು ಕೂಡಲೇ ಅಭಿವೃದ್ಧಿಪಡಿಸಿಕೊಡಲು, 3ನೇ ಅಡ್ಡರಸ್ತೆಯಲ್ಲಿ ಹೆಚ್.ಟಿ ಲೈನ್ ಅಡ್ಡರಸ್ತೆಗಳಲ್ಲಿ ಹೂಳು ತೆಗೆಯಲು ಮತ್ತು ಮೋರ್ ಹಿಂಭಾಗದ ಅಡ್ಡರಸ್ತೆಗಳನ್ನು ಅಭಿವೃದ್ಧಿ ಪಡಿಸಿಕೊಡಲು ಕೋರಿಕೊಂಡಿರುತ್ತಾರೆ.
ಕ್ರಮ:- ಸಹಾಯಕ ಅಭಿಯಂತರರು, ಹೊರಮಾವು ವಾರ್ಡ್ ನಂ.84 ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ.ರಾಜ್‌ಗೋಪಾಲ್ ವಾರ್ಡ್ ನಂ.84:-** ರವರು ಮಾತನಾಡಿ, ಹಳೇ ಪೋಸ್ಟ್ ಆಫೀಸ್ 4ನೇ ಅಡ್ಡರಸ್ತೆಯಲ್ಲಿ ಅನುಪಯುಕ್ತ ಮಣ್ಣನ್ನು ಬೇರೆಕಡೆಗೆ ಸಾಗಿಸಲು ಕೋರಿಕೊಂಡಿರುತ್ತಾರೆ.
ಕ್ರಮ:- ಸಹಾಯಕ ಅಭಿಯಂತರರು, ಹೊರಮಾವು ವಾರ್ಡ್ ನಂ.84 ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.**

ಶ್ರೀ. ರಮೇಶ್
ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ-83
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಶ್ರೀ. ದೊಡ್ಡಶಾಮಚಾರಿ
ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ-84
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-
1.ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಮಂಡಿಸಲಾಗಿದೆ.
2.ಕಛೇರಿ ಪ್ರತಿ.